ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರಿಜಿಸ್ಟರಾಗಿರುವ ಕಂಪೆನಿಗಳು ನಮರ್ಪಕವಾಗಿ ಕೆಲಸ ನಡೆಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ರಾಜ್ಯಾಂಗದ ಪ್ರಕಾರ ಜಾಯಿಂಟ್ ಸ್ಟಾಕ್ ಕಂಪೆನಿಗಳ ವಿಚಾರ ಕೇಂದ್ರ ಸರ್ಕಾರಕ್ಕೆ ಸೇರಿದೆ. ಲಿಸ್ಟ್ ಒಂದು, ಏಳನೆಯ ಷೆಡ್ಯೂಲ್ 41ನೆಯ ಐಟಂನಲ್ಲಿ ಇದು ಸೆಂಟ್ರಲ್ ಸಬ್ಜೆಕ್ಟೆಂದು ಹೇಳಿದೆ. ಆದ್ದರಿಂದ ನಾವು ಈ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಪ್ರಕಾರ ಅವಕಾಶವಿರುವಂತೆ ಕಾಣುವುದಿಲ್ಲ. ಬಹುಶಃ ಆ ದೃಷ್ಟಿಯಿಂದ ತಾವು ಕೇಳಿದ್ದ ಕೆಲವು ಪ್ರಶ್ನೆಗಳು ತಪ್ಪಿಹಾಕಲ್ಪಟ್ಟಿರಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಪ್ರತಿ ವರ್ಷ ಲಾಭ ನಷ್ಟದ ತಃಖ್ತೆ ಮತ್ತು ವರದಿಯನ್ನು ಸರ್ಕಾರಕ್ಕೆ ಕಳುಹಿಸುತ್ತಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರೈವೇಟ್ ಕಂಪೆನಿಗಳನ್ನು ನಾವು ಕೇಳುವುದಕ್ಕೆ ಅಧಿಕಾರವಿಲ್ಲ.

Development of Malnad.

Q.—1012. **Sm. B. L. SUBBAMMA** (Chikmagalur-Mudigere).—

Will the Government be pleased to state :—

(*a*) the steps taken for the development of Malnad during the last two years ;

(*b*) the amount provided for communication facilities ;

(*c*) the amount provided for drinking water wells ;

(*d*) the amount provided to each district ?

A.—**Sri Kadidal MANJAPPA** (Minister for Revenue and Public Works), [On behalf of SRI K. HANUMANTHAIYA (Chief Minister)].—

(*a*) Under Malnad Development Programme, five Irrigation Works have been completed and ten works are nearing completion.

The several schemes of the various departments under the Five-Year Plan of the State are also under implementation in the Malnad areas of the State. A Community Project is under operation in Sorab-Shikaripur area of Shimoga District.

The National Extension Service Scheme is started in Koppa *cum* Narasimharajapura areas of Chikmagalur District.

(*b*) A provision of Rs. 35 lakhs is made in the Five-Year plan of the State for Inter-Village Roads including construction of minor bridges and culverts in Malnad under the Malnad Development.

(*c*) The Scheme for Rural Water Supply included in the Five-Year Plan of the State at a cost of Rs. 68.75 lakhs is also applicable to Malnad areas of the State.

(*d*) Provision is made in the Five-Year Plan for the State as a whole and not according to the Districts.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—(ಡಿ) ಪ್ರಶ್ನೆಗೆ ಉತ್ತರವಾಗಿ "ಪಂಚವಾರ್ಷಿಕ ಯೋಜನೆಯಲ್ಲಿ ಹಣವನ್ನು ಇಡೀ ಸಂಸ್ಥಾನಕ್ಕೆ ಒದಗಿಸಿದೆಯೇ ವಿನಾ ಡಿಸ್ಟ್ರಿಕ್ಟುವಾರಾಗಿ ಒದಗಿಸಿರುವುದಿಲ್ಲ." ಎಂದು ಹೇಳಿದೆ. ಹಾಗಾದರೆ ಮಲೆನಾಡು ಅಭಿವೃದ್ಧಿಗೆ ಗ್ರಾಂಟನ್ನು ಒದಗಿಸಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಮೈಸೂರಿನ ಯೋಜನೆಯಲ್ಲಿ ನಮೂದಾಗಿದೆ.

Sri G. DUGGAPPA.—May I know whether Government have taken up the rural water supply scheme ?

Sri Kadidal MANJAPPA.—The scheme is there from quite a long time.

Sri G. DUGGAPPA.—Has it been operated last year, Sir ?

Sri Kadidal MANJAPPA.—Last year, I have already stated, about 12 or 13 lakhs were given.

Sri G. DUGGAPPA.—Will the Government be pleased to give the districtwar figure and the amount spent in each district according to this plan, Sir ?

Sri Kadidal MANJAPPA.—I want notice to answer that question.

ಶ್ರೀ ಆರ್. ಅನಂತರಾಮಣ್.—ಮಲೆನಾಡಿಗೆ ಒಂದು ಕೋಟಿ ರೂಪಾಯಿ ಒದಗಿಸಿರುವುದನ್ನು ಹೇಗೆ ಉಪಯೋಗಿಸಲಾಗುತ್ತದೆಂಬುದು ಪಂಚವಾರ್ಷಿಕ ಯೋಜನೆಯಲ್ಲಿ ನಮೂದಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಗಿದೆ. ಕಮ್ಯೂನಿಕೇಷನ್, ಹೆಲ್ತ್ ಯೂನಿಟ್ಸ್, ಇರಿಗೇಷನ್ ವರ್ಕ್ಸ್ ಮುಂತಾದುದಕ್ಕೆ.

ಶ್ರೀ ಜಿ. ಪುಟ್ಟಸ್ವಾಮಿ.—ರಾಷ್ಟ್ರಾಭಿವೃದ್ಧಿ ಕಾರ್ಯಗಳ ವಿಸ್ತರಣ ಯೋಜನೆಗೆ ಮತ್ತು ಅದರ ಕಾರ್ಯನಿರ್ವಹಣೆಗೆ ನಾಕರರನ್ನು ನೇಮಿಸಿಲ್ಲದಿರುವುದರಿಂದ ಅದರ ಕೆಲಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Sri Kadidal MANJAPPA.—My friend tells me that an officer has been appointed.

ಶ್ರೀ ಜಿ. ಪುಟ್ಟಸ್ವಾಮಿ,—ಇದರಲ್ಲೆಷ್ಟು ಖರ್ಚಾಗಿದೆ ? ಎಷ್ಟು ಕಾರ್ಯ ನಡೆದಿದೆ ?

ಅಧ್ಯಕ್ಷರು.—ಅದಕ್ಕೆ ನೋಟೀಸ್ ಬೇಕೆಂದು ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಅಲ್ಲಿ ಎಷ್ಟು ನಿರೀಕ್ಷಿಸಿತ್ತೋ ಅಷ್ಟು ಕೆಲಸ ನಡೆಯುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ರಾಷ್ಟ್ರಾಭಿವೃದ್ಧಿ ಕಾರ್ಯಗಳ ವಿನ್ಯಾಸಣೆ ಯೋಜನೆ ಪ್ರಕಾರ ಸರಿಯಾಗಿ ಕೆಲಸ ನಡೆಯುತ್ತಿದೆ.

ಶ್ರೀ ಬಿ. ರಾಚಯ್ಯ.—ಈ ಪ್ರಶ್ನೆಯ 'ಬ' ಮತ್ತು 'ಸಿ' ಭಾಗದ ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ ತಿಳಿಸಿರುವ ಮೊಬಲಗಿನ ಪೈಕಿ ಎಷ್ಟು ಖರ್ಚು ಮಾಡಿರುತ್ತೀರಿ ?

Sri Kadidal MANJAPPA.—Figures are not readily available.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಲೆನಾಡು ಅಭಿವೃದ್ಧಿ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದವರ ನಲಹೆಯ ಬಗ್ಗೆ ನಮ್ಮ ಸರ್ಕಾರದವರು ಏನು ಮಾಡಿರುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಯೋಜನೆಯನ್ನು ಕಾರ್ಯಗತ ಮಾಡುವ ವಿಚಾರವನ್ನು ಆಯಾ ಸಂಸ್ಥಾನಗಳಿಗೇ ಬಿಟ್ಟಿರುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಲೆನಾಡು ಅಭಿವೃದ್ಧಿ ಬಗ್ಗೆ ಒಂದು ಯೋಜನೆಯನ್ನು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಮಲೆನಾಡು ಅಭಿವೃದ್ಧಿ ಯೋಜನೆಗೆ ಸರ್ಕಾರದ ಪೂರ್ಣ ಸಹಕಾರ ನೀಡುವ ಅಭಿಪ್ರಾಯವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದ ಮಟ್ಟಿಗೂ ಸಹಕಾರ ನೀಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಬಿ. ಹುಚ್ಚೇಗೌಡ.—ಕಮ್ಯೂನಿಟಿ ಪ್ರಾಜೆಕ್ಟ್‌ಗಾಗಿ ಒದಗಿಸಿರತಕ್ಕ ಹಣವನ್ನು ಮಲೆನಾಡು ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆಂದಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ; ಕಮ್ಯೂನಿಟಿ ಪ್ರಾಜೆಕ್ಟನ್ನು ಎರಡು ತಾಲ್ಲೂಕುಗಳಲ್ಲಿ ಪ್ರಾರಂಭಿಸಿದೆ, ಬಾಕಿ ಕಡೆ ಹೆಚ್ಚ್ಯೂನಿಟ್ಟುಗಳನ್ನು ಸ್ಥಾಪಿಸಿದ್ದಾರೆ, ಆಮೇಲೆ ರೂರಲ್ ಕಮ್ಯೂನಿಕೇಷನ್‌ಸಿಗೆ ಒದಗಿಸಿದೆ.

ಶ್ರೀ. ಬಿ ಹುಚ್ಚೇಗೌಡ.—ಇದಕ್ಕೆಲ್ಲಾ ಕಮ್ಯೂನಿಟಿ ಪ್ರಾಜೆಕ್ಟ್‌ಗಾಗಿ ಒದಗಿಸಿರುವ ಫಂಡಿನಿಂದಲೇ ಹಣವನ್ನು ಖರ್ಚು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಮ್ಯೂನಿಟಿ ಪ್ರಾಜೆಕ್ಟ್ ಕೆಲಸವನ್ನು ಪ್ರಾರಂಭಿಸಿರುವ ಕಡೆ ಆ ಫಂಡಿನಿಂದ ಖರ್ಚು ಮಾಡಲಾಗುತ್ತದೆ; ಬಾಕಿ ಕಡೆಗಳಲ್ಲಿ ಬೇರೆ ಫಂಡಿನಿಂದ ಖರ್ಚು ಮಾಡುತ್ತಾರೆ.

Registration Office at Kottur

Q. 701.—Sri KOTRA BASAVANA GOWD (Kudligi).—

Will the Government be pleased to state :—

(*a*) whether it is a fact that Madras Government contemplated to open a registration office at Kottur in view of heavy work ;

(*b*) whether they will take steps to open such office at Kottur in the near future ?

A.—Sri Kadidal MANJAPPA (Minister for Revenue and Public Works).—

(*a*) Yes.

It is reported that the question was considered in 1951 but was dropped.

(*b*) No.

ಶ್ರೀ ಕೊಟ್ರ ಬಸವನಗೌಡ.—ರಿಜಿಸ್ಟ್ರೇಷ್ ಆಫೀಸ್ ಒಂದನ್ನು ಕೊಟ್ಟೂರಿನಲ್ಲಿ ತೆಗೆಯಬೇಕೆಂದು ಮದ್ರಾಸ್ ಸರ್ಕಾರದವರು ಯೋಚಿಸಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ; ಆದರೆ ಅಲ್ಲಿಯ ಜಿಲ್ಲಾಧಿಕಾರಿಗಳ ವರದಿಯ ಪ್ರಕಾರ ಆ ಸ್ಥಳದಲ್ಲಿ ರಿಜಿಸ್ಟ್ರೇಷ್ ಆಫೀಸ್ ಅನಾವಶ್ಯಕ, ಈಗ ಸಂಡೂರಿನಲ್ಲಿ ಒಂದು ರಿಜಿಸ್ಟ್ರೇಷ್ ಆಫೀಸ್ ಪ್ರಾರಂಭವಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ ಕೊಟ್ರ ಬಸವನಗೌಡ.—ಕೂಡ್ಲಿಗಿಯ ಅರ್ಧ ಭಾಗದ ಜನರಿಂದ ಸಹ ಈ ಬಗ್ಗೆ ಒತ್ತಾಯ ಬಂದಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಂಡೂರಿನಲ್ಲಿ ರಿಜಿಸ್ಟ್ರೇಷ್ ಆಫೀಸೊಂದನ್ನು ಪ್ರಾರಂಭಿಸಿರುವುದರಿಂದ, ಕೂಡ್ಲಿಗಿಯ ಕೆಲವು ಗ್ರಾಮಗಳು ಆ ಆಫೀಸಿಗೆ attach ಆಗಿರುವುದರಿಂದ ಈ ಬಗ್ಗೆ ಕೂಡ್ಲಿಗಿಯಲ್ಲಿ ಕೆಲಸ ಕಾರ್ಯಗಳು ಕಡಮೆಯಾಗುತ್ತವೆ.

ಶ್ರೀ ಎಸ್. ಪರಮೇಶ್ವರಪ್ಪ.—ಮದ್ರಾಸ್ ಸರ್ಕಾರದವರು ಸಹ ಈ ರಿಜಿಸ್ಟ್ರೇಷ್ ಆಫೀಸು ಅಲ್ಲಿ ಅತ್ಯವಶ್ಯಕವೆಂದು ಪರಿಗಣಿಸಿದ್ದುದು ತಮಗೆ ಗೊತ್ತಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ; 1951 ರಲ್ಲಿ ಇದನ್ನು ಅವರು ಪರಿಶೀಲಿಸಿ ಅನಂತರ ಈ ವಿಚಾರವನ್ನು ಅಲ್ಲಗೇ ಬಿಟ್ಟಿರುತ್ತಾರೆಂದು ತಿಳಿದು ಬಂದಿದೆ.

Jampadahalla Reservoir

Q. 733.—Sri T. NAGAPPA (Tarikere).—

Will the Government be pleased to state :—

(a) how many times estimates have been prepared after conducting surveys for constructing a reservoir by putting an anecut across the Jampadahalla near kasaba Duggalapura village, Tarikere Taluk ;

(*b*) the steps they have taken subsequently regarding the said project ;

(*c*) when they have decided to commence the work of this reservoir ?

A.—Sri Kadidal MANJAPPA (Minister for Revenue and Public Works).—

(a) Twice.